ಕರ್ನಾಟಕ ಸರ್ಕಾರ

**ಕರ್ನಾಟಕ ಪರೀಕ್ಷಾ ಪ್ರಾಧಿಕಾರ**

**ಸಂಪಿಗೆ ರಸ್ತೆ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560012**

**ಸಂಖ್ಯೆ :** ಇಡಿ/ಕೆಇಎ/ಕೆಸೆಟ್/2022–23 **ದಿನಾಂಕ:** 11–09–2023

# ಅಧಿಸೂಚನೆ

## ಕರ್ನಾಟಕ ರಾಜ್ಯ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆ ಕೆಸೆಟ್ – 2023

ಕರ್ನಾಟಕ ಸರ್ಕಾರದ ನಿರ್ದೇಶನದಂತೆ, ಕರ್ನಾಟಕ ರಾಜ್ಯ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆ–2023 (ಕೆಸೆಟ್–2023) ಅನ್ನು **26 ನವೆಂಬರ್ 2023 (ಭಾನುವಾರ)**ರಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ನಡೆಸಲಾಗುತ್ತಿದ್ದು, ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಕರೆಯಲಾಗಿದೆ.

| | | |
|---|---|---|
| 1) | ಅಧಿಸೂಚನೆ ಹೊರಡಿಸಲಾಗುವ ದಿನಾಂಕ | 11–09–2023 |
| 2) | ಮಾಹಿತಿ ಪುಸ್ತಕ ಪ್ರಕಟಿಸಲಾಗುವ ದಿನಾಂಕ | 11–09–2023 |
| 3) | ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆ ದಿನಾಂಕ: | 11–09–2023 ರಿಂದ 30.09.2023ರ ವರೆಗೆ |
| 4) | ಅರ್ಜಿ ಶುಲ್ಕ ಪಾವತಿಸಲು ಕೊನೆಯ ದಿನಾಂಕ | 03–10–2023 |
| 5) | ಪರೀಕ್ಷಾ ದಿನಾಂಕ | 26.11.2023 |

ಅಭ್ಯರ್ಥಿಗಳು ಕೆಸೆಟ್–2023ಕ್ಕೆ **"Online"** ಮೂಲಕ ಮಾತ್ರ ಅರ್ಜಿ ಸಲ್ಲಿಸಬಹುದು. ಯಾವುದೇ ಇತರ ನಮೂನೆಯಲ್ಲಿ ಅರ್ಜಿಯನ್ನು ಸ್ವೀಕರಿಸಲಾಗುವುದಿಲ್ಲ. KEA ವೆಬ್‌ಸೈಟ್ https://kea.kar.nic.in ಅನ್ನು ಪ್ರವೇಶಿಸುವ ಮೂಲಕ ಆನ್‌ಲೈನ್ ಅರ್ಜಿ ಸಲ್ಲಿಸಬಹುದಾಗಿದೆ.

**ಅರ್ಜಿಯನ್ನು ಸಲ್ಲಿಸುವ ಮುನ್ನ ಈ ಕೆಳಕಂಡ ಅಧಿಸೂಚನೆಯನ್ನು ಗಮನವಿಟ್ಟು ಓದಿ ನಂತರ ಅರ್ಜಿಯನ್ನು ಭರ್ತಿಮಾಡಬೇಕು.**

- ಕೆಸೆಟ್ (KSET) 2023ರ ಪರೀಕ್ಷೆಯನ್ನು 41 ವಿಷಯಗಳಲ್ಲಿ ನಡೆಸಲಾಗುತ್ತಿದ್ದು, ಪರೀಕ್ಷಾ ಕೇಂದ್ರಗಳ ವಿವರಗಳನ್ನು ಪುಟ ಸಂಖ್ಯೆ: 07 ರಲ್ಲಿ ನೀಡಲಾಗಿದೆ.
- ಈ ಪರೀಕ್ಷೆಯಲ್ಲಿ ಅರ್ಹತೆ ಪಡೆದ ಅಭ್ಯರ್ಥಿಗಳು, ಕರ್ನಾಟಕ ರಾಜ್ಯದ ಯಾವುದೇ ವಿಶ್ವವಿದ್ಯಾನಿಲಯ / ಪ್ರಥಮ ದರ್ಜೆ ಪದವಿ ಕಾಲೇಜು / ಉನ್ನತ ಶಿಕ್ಷಣ ಸಂಸ್ಥೆ (ಸರ್ಕಾರಿ, ಅನುದಾನಿತ ಮತ್ತು ಖಾಸಗಿ) ಗಳಲ್ಲಿ ಸಹಾಯಕ ಪ್ರಾಧ್ಯಾಪಕ ಹುದ್ದೆಗಳಿಗೆ ನೇಮಕಗೊಳ್ಳಲು ಅರ್ಹರಾಗಿರುತ್ತಾರೆ ಹಾಗೂ ಆಯಾ ಸಂಸ್ಥೆಗಳ ನಿಯಮ ಮತ್ತು ಕಾಯ್ದೆಗಳಿಗೆ ಒಳಪಟ್ಟಿರುತ್ತಾರೆ.
- ಪರಿಶಿಷ್ಟ ಜಾತಿ (SC), ಪರಿಶಿಷ್ಟ ಪಂಗಡ (ST), ವಿಕಲಚೇತನ (PWD) ಮತ್ತು ಇತರೆ ಹಿಂದುಳಿದ (OBCs) ಅಭ್ಯರ್ಥಿಗಳು, (ಪ್ರವರ್ಗ – I, IIA, IIIA, ಮತ್ತು IIIB) ಕರ್ನಾಟಕ ಸರ್ಕಾರದ ಹಿಂದುಳಿದ ವರ್ಗದವರ ಪಟ್ಟಿಯಲ್ಲಿರುವಂತಿರಬೇಕು.

### I) ಅರ್ಹತಾ ನಿಬಂಧನೆಗಳು :

1) ಅಭ್ಯರ್ಥಿಗಳು ಯು.ಜಿ.ಸಿ ಯಿಂದ ಮಾನ್ಯತೆ ಪಡೆದಿರುವ ವಿಶ್ವವಿದ್ಯಾನಿಲಯ / ಉನ್ನತ ಶಿಕ್ಷಣ ಸಂಸ್ಥೆಯಿಂದ ಸ್ನಾತಕೋತ್ತರ ಪದವಿ ಅಥವಾ ಸಮಾನವಾದ ಪರೀಕ್ಷೆಗಳಲ್ಲಿ ಸಾಮಾನ್ಯ ವರ್ಗದ ಅಭ್ಯರ್ಥಿಗಳು ಶೇ.55% ರಷ್ಟು ಅಂಕಗಳನ್ನು (ಪೂರ್ಣಾಂಕಿತ ಗೊಳಿಸಿರಬಾರದು) ಪಡೆದಿರಬೇಕು. ಪರಿಶಿಷ್ಟ ಜಾತಿ (SC), ಪರಿಶಿಷ್ಠ ಪಂಗಡ (ST), ವಿಕಲಚೇತನರು (PWD) ಅಭ್ಯರ್ಥಿಗಳು, (ಪ್ರವರ್ಗ – I, IIA, IIIA, ಮತ್ತು IIIB) ಗುಂಪಿಗೆ ಸೇರಿದ ಅಭ್ಯರ್ಥಿಗಳು ಮತ್ತು ತೃತೀಯ ಲಿಂಗದ ಅಭ್ಯರ್ಥಿಗಳು ಶೇ. 50% ರಷ್ಟು (ಪೂರ್ಣಾಂಕಿತ ಗೊಳಿಸಿರಬಾರದು) ಅಂಕಗಳನ್ನು ಪಡೆದಿರಬೇಕು.
2) ಸ್ನಾತಕೋತ್ತರ ಪದವಿ ಪಡೆದವರು ಹಾಗೂ ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ (ಪ್ರಥಮ ಮತ್ತು ದ್ವಿತೀಯ) ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ಕೆಸೆಟ್ ಪರೀಕ್ಷೆಯನ್ನು ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ. ಆದರೆ, ಪ್ರಸ್ತುತ ವ್ಯಾಸಂಗ ಮಾಡುತ್ತಿರುವ ಅಭ್ಯರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ತಾತ್ಕಾಲಿಕವಾಗಿ ಮಾತ್ರ ಪ್ರವೇಶ ನೀಡಲಾಗುವುದು ಮತ್ತು ಅವರು ಸ್ನಾತಕೋತ್ತರ ಪದವಿ ಅಥವಾ ಸಮಾನವಾದ ಪರೀಕ್ಷೆಯನ್ನು ಸಾಮಾನ್ಯ ವರ್ಗದವರು ಶೇ.55% ರಷ್ಟು ಹಾಗೂ ಪರಿಶಿಷ್ಟ ಜಾತಿ (SC), ಪರಿಶಿಷ್ಟ ಪಂಗಡ (ST), ವಿಲಚೇತನರು (PWD) / ದೃಷ್ಟಿದೋಷವುಳ್ಳ / (ಪ್ರವರ್ಗ – I, IIA, IIIA, ಮತ್ತು IIIB) ಅಭ್ಯರ್ಥಿಗಳು ಮತ್ತು ತೃತೀಯ ಲಿಂಗದ ಅಭ್ಯರ್ಥಿಗಳು ಶೇ. 50% ರಷ್ಟು ಅಂಕ ಪಡೆದು, ಅರ್ಹತೆ ಹೊಂದಿದಾಗ ಮಾತ್ರ ಅಂತಹ ಅಭ್ಯರ್ಥಿಗಳು ಕೆಸೆಟ್ ಪರೀಕ್ಷೆಯ ಫಲಿತಾಂಶ ಪ್ರಕಟಿಸಿದ ದಿನಾಂಕದಿಂದ ಎರಡು ವರ್ಷದೊಳಗಾಗಿ ಅವರ ಸ್ನಾತಕೋತ್ತರ ಪದವಿಯ ಅಂಕಪಟ್ಟಿಗಳನ್ನು ಸಲ್ಲಿಸಿದರೆ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪ್ರಮಾಣ ಪತ್ರ ಪಡೆಯಬಹುದು. ಇಲ್ಲವಾದಲ್ಲಿ ಅಂತಹವರ ಅರ್ಹತೆಯನ್ನು ರದ್ದುಪಡಿಸಲಾಗುವುದು.

3) ಸ್ನಾತಕೋತ್ತರ ಪದವಿಯಲ್ಲಿ ಅಧ್ಯಯನ ಮಾಡಿದ ವಿಷಯದಲ್ಲಿಯೇ ಅಭ್ಯರ್ಥಿಗಳು ಕೆಸೆಟ್ (KSET) ಪರೀಕ್ಷೆಯನ್ನು ತೆಗೆದುಕೊಳ್ಳಬೇಕು. ಪ್ರಸ್ತುತ ಕೆಸೆಟ್ ಪ್ರಕಟಣೆಯಲ್ಲಿ ಇಲ್ಲದಿರುವ ವಿಷಯಗಳಿಗೆ ಅಭ್ಯರ್ಥಿಗಳು ವರ್ಷದಲ್ಲಿ ಎರಡು ಬಾರಿ ನಡೆಯುವ ಯು.ಜಿ.ಸಿ, ಎನ್.ಇ.ಟಿ ಅಥವಾ ಯು.ಜಿ.ಸಿ–ಸಿ.ಎಸ್.ಐ.ಆರ್–ಎನ್.ಇ.ಟಿ ಪರೀಕ್ಷೆಯನ್ನು ತೆಗೆದುಕೊಳ್ಳಬಹುದು.

4) 1991ರ ಸೆಪ್ಟೆಂಬರ್ 19ರೊಳಗೆ ಸ್ನಾತಕೋತ್ತರ ಪರೀಕ್ಷೆಯನ್ನು ಪೂರ್ಣಗೊಳಿಸಿ (ಫಲಿತಾಂಶ ಘೋಷಣೆಯ ದಿನಾಂಕವನ್ನು ಲೆಕ್ಕಿಸದೆ) ಹಾಗೂ ಪಿ.ಹೆಚ್.ಡಿ ಪದವಿ ಪಡೆದವರು ಕೆಸೆಟ್ ಪರೀಕ್ಷೆಯನ್ನು ತೆಗೆದುಕೊಳ್ಳಲು ಒಟ್ಟು ಅಂಕಗಳಲ್ಲಿ 5% ವಿನಾಯಿತಿ ಇರುತ್ತದೆ. (55% ರಿಂದ 50% ವರೆಗೆ)

5) ಆನ್‌ಲೈನ್ ಅರ್ಜಿ ನಮೂನೆಯನ್ನು ಸಲ್ಲಿಸಲು ಕೊನೆಯ ದಿನಾಂಕದಂದು ಅಥವಾ ಅದಕ್ಕೆ ಮೊದಲು ಸಕ್ಷಮ ಪ್ರಾಧಿಕಾರಗಳು ನೀಡುವ ಪ್ರವರ್ಗ ಪ್ರಮಾಣಪತ್ರಗಳು, (SC, ST, CAT-1, IIA, IIB, IIIA, ಮತ್ತು IIIB) ಅಭ್ಯರ್ಥಿಗಳಿಗೆ ಮಾತ್ರ ಯಾವುದೇ ಹಂತದಲ್ಲಾದರೂ, ಪ್ರಾಧಿಕಾರವು ಸುಳ್ಳು ಪ್ರಮಾಣಪತ್ರದ ಕಾರಣದಿಂದಾಗಿ ಅವರ ಅನರ್ಹತೆ ಪತ್ತೆಯಾದರೆ, ಅವರ ಅಭ್ಯರ್ಥಿತ್ವವನ್ನು ಪೂರ್ವ ಸೂಚನೆ ಇಲ್ಲದೆ ರದ್ದುಗೊಳಿಸಲಾಗುತ್ತದೆ ಮತ್ತು ಕಾನೂನು ಕ್ರಮಕ್ಕೆ ಅವರು ಹೊಣೆಗಾರರಾಗಿರುತ್ತಾರೆ.

6) ಕರ್ನಾಟಕ ರಾಜ್ಯವನ್ನು ಹೊರತುಪಡಿಸಿ, ಹೊರರಾಜ್ಯದ ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗ ಮತ್ತು ಇತರ ಹಿಂದುಳಿದ ವರ್ಗಕ್ಕೆ ಸೇರಿದ (CAT-1, IIA, IIB, IIIA, ಮತ್ತು IIIB) ಅಭ್ಯರ್ಥಿಗಳು ಕೆಸೆಟ್ ಪರೀಕ್ಷೆಯನ್ನು ಸಾಮಾನ್ಯ ವರ್ಗದಡಿಯಲ್ಲಿ (GM) ಮಾತ್ರ ತೆಗೆದುಕೊಳ್ಳಬೇಕು.

7) ಅಭ್ಯರ್ಥಿಗಳು ಮುಖ್ಯವಾಗಿ ಗಮನಿಸಬೇಕಾದ ಅಂಶವೇನೆಂದರೆ ಅವರ ಅಭ್ಯರ್ಥಿತನವು ತಾತ್ಕಾಲಿಕವೆಂದು ಭಾವಿಸಿಕೊಳ್ಳತಕ್ಕದ್ದು. ಪ್ರವೇಶಾತಿ ಪಡೆದ ಕಾರಣಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಅವರನ್ನು ಅರ್ಹ ಅಭ್ಯರ್ಥಿಯಾಗಿ ಪರಿಗಣಿಸಿದೆ ಎಂದು ತಿಳಿಯಬಾರದು. ಅಭ್ಯರ್ಥಿಗಳ ಅರ್ಹತಾ ನಿಬಂಧನೆಗಳನ್ನು ಪರಿಶೀಲಿಸಿದ ನಂತರ ಅವರ ಅಭ್ಯರ್ಥಿತನವನ್ನು ಪರಿಗಣಿಸಲಾಗುವುದು.

8) ಈಗಾಗಲೇ ಕೆಸೆಟ್ ಪರೀಕ್ಷೆಯಲ್ಲಿ ಅರ್ಹತೆ ಪಡೆದ ಅಭ್ಯರ್ಥಿಗಳು ಮುಂಬರುವ ಕೆಸೆಟ್ ಪರೀಕ್ಷೆಗೆ ಅದೇ ವಿಷಯದಲ್ಲಿ (Same Subject) ಅರ್ಜಿ ಸಲ್ಲಿಸುವಂತಿಲ್ಲ. ಕೆಸೆಟ್ ಅರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳು ಪುನಃ ಅರ್ಜಿ ಸಲ್ಲಿಸಿದ್ದು ಕಂಡು ಬಂದ ಪಕ್ಷದಲ್ಲಿ ಅಂತಹ ಅಭ್ಯರ್ಥಿಗಳ ಅರ್ಹತೆಯನ್ನು ರದ್ದುಗೊಳಿಸಲಾಗುವುದು ಹಾಗೂ ಅವರು ಹಿಂದೆ ಪಡೆದಿರುವ ಕೆಸೆಟ್ ಪರೀಕ್ಷೆಯ ಅರ್ಹತೆಯನ್ನು ಕೂಡ ಡಿನೋಟಿಫಿಕೇಷನ್ ಮೂಲಕ ಹಿಂಪಡೆಯಲಾಗುವುದು.

9) ಭಾರತೀಯ ವಿಶ್ವವಿದ್ಯಾಲಯ / ಸಂಸ್ಥೆ ನೀಡುವ ಸ್ನಾತಕೋತ್ತರ ಡಿಪ್ಲೊಮಾ / ಪ್ರಮಾಣಪತ್ರ ಅಥವಾ ವಿದೇಶಿ ವಿಶ್ವವಿದ್ಯಾಲಯ / ಸಂಸ್ಥೆ ನೀಡುವ ವಿದೇಶಿ ಪದವಿ / ಡಿಪ್ಲೊಮಾ ಪ್ರಮಾಣ ಪತ್ರ ಹೊಂದಿರುವ ಅಭ್ಯರ್ಥಿಗಳು ತಮ್ಮ ಹಿತದೃಷ್ಟಿಯಿಂದ, ಮಾನ್ಯತೆ ಪಡೆದ ಭಾರತೀಯ ಸ್ನಾತಕೋತ್ತರ ಪದವಿಯೊಂದಿಗೆ ತಮ್ಮ ಡಿಪ್ಲೊಮಾ/ ಪದವಿ/ ಪ್ರಮಾಣಪತ್ರದ ಸಮಾನತೆಯನ್ನು ಖಚಿತಪಡಿಸಿಕೊಳ್ಳಬೇಕು. (ಅಸೋಸಿಯೇಷನ್ ಆಫ್ ಇಂಡಿಯನ್ ಯೂನಿವರ್ಸಿಟೀಸ್ (ಎಐಯು) ನವದೆಹಲಿ).

II) **ವಯೋಮಿತಿ :**

ಕರ್ನಾಟಕ ರಾಜ್ಯ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆ ತೆಗೆದುಕೊಳ್ಳಲು ಗರಿಷ್ಠ ವಯೋಮಿತಿ ಇರುವುದಿಲ್ಲ.

III) **ವಿನಾಯಿತಿ :**

ಕರ್ನಾಟಕ ರಾಜ್ಯದಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ವಿಶ್ವವಿದ್ಯಾನಿಲಯ / ಪ್ರಥಮ ದರ್ಜೆ ಕಾಲೇಜುಗಳು / ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ (ಸರ್ಕಾರಿ / ಅನುದಾನಿತ / ಖಾಸಗಿ) ನೇಮಕವಾಗಬೇಕಾದರೆ, ಅಭ್ಯರ್ಥಿಗಳು ಕಡ್ಡಾಯವಾಗಿ ಕೆಸೆಟ್ ಅಥವಾ ಎನ್.ಇ.ಟಿ ಪರೀಕ್ಷೆಯಲ್ಲಿ ಅರ್ಹತೆ ಪಡೆದಿರಬೇಕೆಂಬ ನಿಯಮವಿದೆ.

ಅ) ಯು.ಜಿ.ಸಿ ಕಾಲಕಾಲಕ್ಕೆ ಹೊರಡಿಸುವ ನಿಬಂಧನೆಗಳು, ಯು.ಜಿ.ಸಿ ಮಾರ್ಗಸೂಚಿಗಳು ಮತ್ತು ಅಧಿನಿಯಮಗಳ ಅನ್ವಯ ಕೆಸೆಟ್ ಅರ್ಹತೆ ಪರೀಕ್ಷೆಯಿಂದ ವಿನಾಯಿತಿ ನೀಡಲಾಗುವುದು.

ಆ) ಅಭ್ಯರ್ಥಿಯು 1989 ಕ್ಕಿಂತ ಮುಂಚಿತವಾಗಿ ಯು.ಜಿ.ಸಿ–ನೆಟ್ / ಸಿ.ಎಸ್.ಐ.ಆರ್–ನೆಟ್, ಜೆ.ಆರ್.ಎಫ್ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿದ್ದಲ್ಲಿ ಅಂತಹವರಿಗೆ ಕೆಸೆಟ್ ಪರೀಕ್ಷೆಯಿಂದ ವಿನಾಯಿತಿ ನೀಡಲಾಗಿದೆ.

ಇ) ಕೆಸೆಟ್ ಅಭ್ಯರ್ಥಿಗಳಿಗೆ : 1ನೇ ಜೂನ್, 2002ಕ್ಕಿಂತ ಮೊದಲೇ ನಡೆಸಲಾದ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದ ಅಭ್ಯರ್ಥಿಗಳಿಗೆ ಕೆಸೆಟ್ ಪರೀಕ್ಷೆಯಿಂದ ವಿನಾಯಿತಿ ನೀಡಲಾಗುತ್ತದೆ. ಅಂತಹ ಅಭ್ಯರ್ಥಿಗಳು ಭಾರತದಲ್ಲಿ ಎಲ್ಲಿಯಾದರೂ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಆ ರಾಜ್ಯದ ವಿಶ್ವವಿದ್ಯಾನಿಲಯಗಳು / ಪ್ರಥಮ ದರ್ಜೆ ಕಾಲೇಜುಗಳಲ್ಲಿ ಮಾತ್ರ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಅರ್ಜಿಯನ್ನು ಸಲ್ಲಿಸಲು ಅರ್ಹರಾಗಿರುತ್ತಾರೆ.

IV) **ಪರೀಕ್ಷಾ ಶುಲ್ಕ ಮತ್ತು ಪಾವತಿಸುವ ವಿಧಾನ :**

**1) ಪರೀಕ್ಷಾ ಶುಲ್ಕ**

| ವರ್ಗ | ಶುಲ್ಕ |
|---|---|
| ಸಾಮಾನ್ಯ ವರ್ಗ, ಪ್ರವರ್ಗ II-A, II-B, III-A, III-B ಹಾಗೂ ಇತರೆ ರಾಜ್ಯದ ಅಭ್ಯರ್ಥಿಗಳಿಗೆ | ರೂ.1,000/- |
| ಪ್ರವರ್ಗ– I, SC, ST, PWD ಮತ್ತು ತೃತೀಯ ಲಿಂಗ ಅಭ್ಯರ್ಥಿಗಳಿಗೆ | ರೂ.700/- |

2) **ಪಾವತಿಸುವ ವಿಧಾನ :**

ಶುಲ್ಕವನ್ನು ಕರ್ನಾಟಕದಲ್ಲಿನ ಗಣಕೀಕೃತ ಅಂಚೆ ಕಛೇರಿಗಳಲ್ಲಿ ಮಾತ್ರ ಪಾವತಿಸಬೇಕು. ಶುಲ್ಕ ವಿನಾಯಿತಿಯನ್ನು ಪ್ರವರ್ಗ– I, SC, ST, ತೃತೀಯ ಲಿಂಗ ಅಭ್ಯರ್ಥಿಗಳಿಗೆ ಮತ್ತು Medical Certificate with 40% or more disability ಹೊಂದಿರುವ PWD ಅಭ್ಯರ್ಥಿಗಳಿಗೆ ನೀಡಲಾಗುತ್ತದೆ.

**ಸೂಚನೆ :**

1. ಬೇರೆ ಯಾವುದೇ ವಿಧಾನದ ಮೂಲಕ ಶುಲ್ಕ ಪಾವತಿಸಲು ಅವಕಾಶವಿರುವುದಿಲ್ಲ. (ಉದಾ: Money Order, Demand Draft, IPO).
2. ಒಮ್ಮೆ ಶುಲ್ಕ ಪಾವತಿಸಿದ ನಂತರ ಯಾವುದೇ ಕಾರಣಕ್ಕೂ ಹಣವನ್ನು ಹಿಂದಿರುಗಿಸಲಾಗುವುದಿಲ್ಲ.

V) **ಪರೀಕ್ಷಾ ವಿಧಾನ :**

ಕೆಸೆಟ್ (KSET) ಪರೀಕ್ಷೆಯಲ್ಲಿ ಎರಡು ಪ್ರಶ್ನೆಪತ್ರಿಕೆಗಳಿರುತ್ತವೆ. ಎರಡು ಪತ್ರಿಕೆಗಳು ಸಹ ಬಹುಸಂಖ್ಯಾ ಆಯ್ಕೆ ಪ್ರಶ್ನೆಗಳನ್ನು ಒಳಗೊಂಡಿರುತ್ತವೆ. ಪರೀಕ್ಷೆಯ ದಿನಾಂಕ: 26–11–2023 ರಂದು ಎರಡು ಅವಧಿಗಳಲ್ಲಿ ಈ ಕೆಳಕಂಡಂತೆ ನಡೆಯುವುದು.

| | ಪತ್ರಿಕೆ | ಅಂಕಗಳು | ಪ್ರಶ್ನೆಗಳ ಸಂಖ್ಯೆ | ಅವಧಿ |
|---|---|---|---|---|
| ಮೊದಲನೇ ಅವಧಿ | I | 100 | 50 ಪ್ರಶ್ನೆಗಳು ಕಡ್ಡಾಯವಾಗಿರುತ್ತವೆ. | 1 ಗಂಟೆ (10.00 ರಿಂದ 11.00 ರವರೆಗೆ) |
| ಎರಡನೇ ಅವಧಿ | II | 200 | 100 ಪ್ರಶ್ನೆಗಳು ಕಡ್ಡಾಯವಾಗಿರುತ್ತವೆ | 2 ಗಂಟೆ (12.00 ರಿಂದ 02.00 ರವರೆಗೆ) |

**ಪತ್ರಿಕೆ – I : ಸಾಮಾನ್ಯ ಪತ್ರಿಕೆಯು ಬೋಧನೆ ಮತ್ತು ಬುದ್ಧಿ ಸಾಮರ್ಥ್ಯಕ್ಕನುಗುಣವಾಗಿರುತ್ತದೆ.**

ಈ ಪತ್ರಿಕೆಯು ಅಭ್ಯರ್ಥಿಗಳ ಸಾಮಾನ್ಯ ಪತ್ರಿಕೆಯಾಗಿದ್ದು, ಸಾಮಾನ್ಯ ಜ್ಞಾನ, ಬೋಧನೆ ಹಾಗೂ ಸಂಶೋಧನೆಯ ಅಭಿರುಚಿಗೆ ಸಂಬಂಧಿಸಿರುತ್ತದೆ. ಅಭ್ಯರ್ಥಿಗಳ ಸಾಮಾನ್ಯ ತಿಳಿವಳಿಕೆಗಳನ್ನು ಗ್ರಹಿಸುವ ಹಾಗೂ ಯೋಚನಾ ಸಾಮರ್ಥ್ಯವನ್ನು ಅಳೆಯುವಂತಹದ್ದಾಗಿರುತ್ತದೆ. ಈ ಪತ್ರಿಕೆಯು 50 ಬಹುಸಂಖ್ಯಾ ಆಯ್ಕೆಯ ಪ್ರಶ್ನೆಗಳನ್ನು ಒಳಗೊಂಡಿದ್ದು, ಪ್ರತಿ ಪ್ರಶ್ನೆಗೆ ಎರಡು ಅಂಕಗಳಿರುತ್ತದೆ. ಹಾಗೂ ಎಲ್ಲಾ ಪ್ರಶ್ನೆಗಳಿಗೂ ಕಡ್ಡಾಯವಾಗಿ ಉತ್ತರಿಸಬೇಕಾಗಿರುತ್ತದೆ.

**ಪತ್ರಿಕೆ – II : ವಿಷಯ ಪತ್ರಿಕೆ**

ಅಭ್ಯರ್ಥಿಯು ಆಯ್ಕೆ ಮಾಡಿದ ವಿಷಯದ ಸಾಮಾನ್ಯ ಜ್ಞಾನದಲ್ಲಿ ಈ ಪತ್ರಿಕೆಯು ಇರುತ್ತದೆ. ಈ ಪತ್ರಿಕೆಯು 100 ಕಡ್ಡಾಯ ಬಹುಸಂಖ್ಯಾ ಆಯ್ಕೆ ಪ್ರಶ್ನೆಗಳನ್ನು ಒಳಗೊಂಡಿದ್ದು, ಪ್ರತಿ ಪ್ರಶ್ನೆಗೂ 2 ಅಂಕಗಳಿರುತ್ತದೆ. ಗರಿಷ್ಠ 200 ಅಂಕಗಳಿರುತ್ತವೆ.

ಪರೀಕ್ಷೆಯಲ್ಲಿ ಪ್ರಶ್ನೆ ಪತ್ರಿಕೆ ಜೊತೆಗೆ ನೀಡುವ ಪೇಪರ್–I ಮತ್ತು ಪೇಪರ್–II ರ ಒ.ಎಂ.ಆರ್. ಹಾಳೆಯಲ್ಲಿ ನಿಗದಿ ಪಡಿಸಿದ ನಮೂನೆಯಲ್ಲಿಯೇ ಉತ್ತರಗಳನ್ನು ಗುರುತಿಸಬೇಕು.

VI) **ಕೆಸೆಟ್ (KSET) ಪರೀಕ್ಷೆಯ ಫಲಿತಾಂಶ ಪ್ರಕಟಣೆಯ ವಿಧಾನ :**

**(Qualifying criteria for UGC-NET to be implemented for KSET, is as per UGC Guidelines / Competent Authority / University are final and binding).**

**ಅಭ್ಯರ್ಥಿಗಳು ಕೆಸೆಟ್** ಪರೀಕ್ಷೆಯಲ್ಲಿ ಅರ್ಹತೆ ಪಡೆಯಲು ಹಾಗೂ ಫಲಿತಾಂಶ ಪ್ರಕಟಣೆಯ ನಿಯಮ ಮತ್ತು ಹಂತಗಳನ್ನು ಈ ಕೆಳಗೆ ನೀಡಲಾಗಿದೆ. ಸಹಾಯಕ ಪ್ರಾಧ್ಯಾಪಕರ ಅರ್ಹತೆಗಾಗಿ ಅಭ್ಯರ್ಥಿಗಳು ಪೇಪರ್–I ಮತ್ತು ಪೇಪರ್–II ರ ಪತ್ರಿಕೆಗಳ ಒಟ್ಟು ಅಂಕಗಳಲ್ಲಿ ಕೆಳಗೆ ನಿರ್ದಿಷ್ಟಪಡಿಸಿದ ಕನಿಷ್ಟ ಅಂಕಗಳನ್ನು ಪಡೆಯಬೇಕು.

| CATEGORY | MINIMUM MARKS (%) TO BE OBTAINED | |
|---|---|---|
| | PAPER-I | PAPER-II |
| **GENERAL (GM)** | 40% Aggregate Marks in all the two papers taken together | |
| **SC/ST/CAT-I/II-A/II-B/III-A/ III-B/PWD/TRANSGENDER** | 35% Aggregate Marks in all the two papers taken together | |

**ಹಂತ– I :** ಸಹಾಯಕ ಪ್ರಾಧ್ಯಾಪಕರ ಅರ್ಹತೆಗಾಗಿ ಒಟ್ಟು ಹಾಜರಾದ ಅಭ್ಯರ್ಥಿಗಳಲ್ಲಿ (Total Slots) ಕೆಸೆಟ್‌ನ ಎರಡು ಪತ್ರಿಕೆಗಳಲ್ಲಿ ಹಾಜರಾದ 6% ಅಭ್ಯರ್ಥಿಗಳ ಸಂಖ್ಯೆಗೆ ಸಮಾನವಾಗಿರುತ್ತದೆ.

**ಹಂತ– II :** ಒದಗಿಸಲಾದ ಒಟ್ಟು ಸ್ಲಾಟ್‌ಗಳಲ್ಲಿ, ಎರಡೂ ಪತ್ರಿಕೆಗಳಲ್ಲಿ ಹಾಜರಾಗಿರಬೇಕು. ಹಂತ– I ನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಒಟ್ಟು ಅಂಕಗಳ ಅಧಾರದ ಮೇಲೆ ಅರ್ಹತಾ ಪಟ್ಟಿಯನ್ನು ವಿಷಯವಾರು ಮತ್ತು ಪ್ರವರ್ಗವಾರು ತಯಾರಿಸಲಾಗುತ್ತದೆ.

ಸಹಾಯಕ ಪ್ರಾಧ್ಯಾಪಕರ ಅರ್ಹತೆಯನ್ನು ಪರಿಗಣಿಸಬೇಕಾದರೆ, ಪತ್ರಿಕೆ – I ಮತ್ತು ಪತ್ರಿಕೆ – II ರಲ್ಲೂ ಹಾಜರಾಗಿ, GM ಅಭ್ಯರ್ಥಿಗಳು ಎರಡೂ ಪತ್ರಿಕೆಯಲ್ಲಿ ಶೇ.40 ಅಂಕಗಳು ಮತ್ತು ಮೀಸಲಾತಿ ವ್ಯಾಪ್ತಿಗೆ ಬರುವ ಪ.ಜಾ/ಪ.ಪಂ, ಇತರೆ ಹಿಂದುಗಳಿದ ವರ್ಗ, ತೃತೀಯ ಲಿಂಗದ ಅಭ್ಯರ್ಥಿಗಳು ಮತ್ತು ವಿಕಲಚೇತನ (SC/ST, OBC, TG and PWD) ಅಭ್ಯರ್ಥಿಗಳು ಎರಡೂ ಪತ್ರಿಕೆಯಲ್ಲಿ ಶೇ.35 ಅಂಕಗಳನ್ನು ಗಳಿಸಿರಬೇಕು. ಅಂತಹ ಅಭ್ಯರ್ಥಿಗಳನ್ನು ಮಾತ್ರ ಅರ್ಹತಾ ಪಟ್ಟಿಗೆ ಪರಿಗಣಿಸಲಾಗುವುದು. ಅಭ್ಯರ್ಥಿಗಳು ಗಳಿಸಿರುವ ಅಂಕಗಳ ಆಧಾರದ ಮೇಲೆ ಮೆರಿಟ್ ಪಟ್ಟಿಯನ್ನು ತಯಾರಿಸಲಾಗುವುದು. ಯುಜಿಸಿಯ ಫಲಿತಾಂಶದ ಸೂತ್ರದ ಪ್ರಕಾರ ಸ್ಲಾಟ್‌ಗಳನ್ನು ತಯಾರಿಸಿ, ರಾಜ್ಯ ಸರ್ಕಾರದ ಮೀಸಲಾತಿ ನೀತಿಯ ಅನುಸಾರವಾಗಿ ಲೆಕ್ಕಚಾರ ಮಾಡಿ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಫಲಿತಾಂಶವನ್ನು ಪ್ರಕಟಿಸಲಾಗುವುದು.

**ಈ ಮೇಲೆ ತಿಳಿಸಿದ ಫಲಿಶಾಂಶದ ಪ್ರಕಟಣೆಯ ವಿಧಾನವು ಕೆಸೆಟ್ ನಿಬಂಧನೆಗಳಿಗೆ ಬದ್ದವಾಗಿರುತ್ತದೆ. ಈ ಸಂಬಂಧ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ತೀರ್ಮಾನವೇ ಅಂತಿಮವಾಗಿರುತ್ತದೆ.**

**ಹಂತ– III : ಯುಜಿಸಿಯ ನಿರ್ದೇಶನದ ಪ್ರಕಾರ, ಹಾಜರಾಗುವ ಅಭ್ಯರ್ಥಿಗಳಲ್ಲಿ ಶೇಕಡ 6ರಷ್ಟು ಅಭ್ಯರ್ಥಿಗಳಿಗೆ ಮಾತ್ರ ಸಹಾಯಕ ಪ್ರಾಧ್ಯಾಪಕರಿಗೆ ಅರ್ಹರು ಎಂದು ಪರಿಗಣಿಸಲಾಗುವುದು. ರಾಜ್ಯದಲ್ಲಿ ಚಾಲ್ತಿಯಲ್ಲಿರುವ ಮೀಸಲಾತಿ ನೀತಿಯನ್ನು ಅನುಸರಿಸಿ ವರ್ಗವಾರು ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪಟ್ಟಿಯನ್ನು ತಯಾರಿಸಲಾಗುತ್ತದೆ.**

**ಈ ಕೆಳಕಂಡ ಸೂತ್ರದ ಪ್ರಕಾರ ವಿಷಯವಾರು ಹಾಗೂ ವರ್ಗವಾರು ಹಂಚಿಕೆ ಮಾಡಲಾಗುವುದು.**

$$\text{No. of Slots in a Subject For General (Unreserved) Candidates} = \frac{\text{No. of General (UR) candidates who have Secured 40\% or more marks in aggregate in the subject}}{\text{Toatal No. of General (UR) candidate who have Secured 40\% or moremarks in Aggregate over all subjects}} \times \text{Total No. of slots available under General (UR) Category}$$

**ಆದ್ದರಿಂದ, ಆನ್‌ಲೈನ್ ಅರ್ಜಿ ನಮೂನೆಯಲ್ಲಿ ವರ್ಗವನ್ನು ಸರಿಯಾಗಿ ನಮೂದಿಸಬೇಕು. (ಆನ್‌ಲೈನ್ ಅರ್ಜಿಯಲ್ಲಿ ವರ್ಗ, ವಿಷಯ ಮತ್ತು ಕೇಂದ್ರ ಇತ್ಯಾದಿಗಳ ಬದಲಾವಣೆಯ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ.)**

**ಮೇಲಿನ ಅರ್ಹತಾ ಮಾನದಂಡಗಳು ಅಂತಿಮವಾಗಿರುತ್ತದೆ ಮತ್ತು ಯುಜಿಸಿಯು ನಿಗದಿ ಪಡಿಸಿದ ನಿಬಂಧನೆಗಳಿಗೆ ಬದ್ಧವಾಗಿರುತ್ತವೆ.**

## VII) **ಕೆಸೆಟ್ ಪಠ್ಯಕ್ರಮ ಮತ್ತು ಪ್ರಶ್ನೆ ಪತ್ರಿಕೆ :**

1. ಪರೀಕ್ಷಾ ಪಠ್ಯಕ್ರಮ: ಕೆಸೆಟ್ (KSET) ಪರೀಕ್ಷಾ ಪಠ್ಯಕ್ರಮವು, ಯು.ಜಿ.ಸಿ / ಸಿ.ಎಸ್.ಐ.ಆರ್ ನೆಟ್ ನಿಗಡಿಪಡಿಸಿರುವ ಪಠ್ಯಕ್ರಮದ ಮಾದರಿಯಲ್ಲೇ ಇರುತ್ತದೆ. ಎಲ್ಲಾ ವಿಷಯಗಳ ಪಠ್ಯಕ್ರಮವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್ ನಿಂದ Download ಮಾಡಿಕೊಳ್ಳಬಹುದು. ಕೆಇಎಯಿಂದ ವಿಷಯಗಳ ಪಠ್ಯಕ್ರಮವನ್ನು ಅಭ್ಯರ್ಥಿಗಳಿಗೆ ಪ್ರತ್ಯೇಕವಾಗಿ ಕಳುಹಿಸಲಾಗುವುದಿಲ್ಲ.

2. ಕನ್ನಡ ಮತ್ತು ಇಂಗ್ಲೀಷ್ ಆವೃತ್ತಿಗಳ ಪ್ರಶ್ನೆ ಪತ್ರಿಕೆಗಳಲ್ಲಿ ಯಾವುದೇ ರೀತಿಯ ವ್ಯತ್ಯಾಸಗಳು ಕಂಡುಬಂದಲ್ಲಿ, ಇಂಗ್ಲೀಷ್ ಆವೃತ್ತಿಗಳಲ್ಲಿರುವುದೇ ಅಂತಿಮವೆಂದು ಪರಿಗಣಿಸಬೇಕು.

VIII) **ವಿಷಯಗಳು :**

ವಿಷಯ ಮತ್ತು ಕೆಸೆಟ್ ಪಠ್ಯಕ್ರಮ : ಪತ್ರಿಕೆ – I ಮತ್ತು ಪತ್ರಿಕೆ – II ರ ಎಲ್ಲಾ ಪ್ರಶ್ನೆಗಳೂ ಕಡ್ಡಾಯವಾಗಿದ್ದು, ಪತ್ರಿಕೆ ಸಂಪೂರ್ಣ ಪಠ್ಯಕ್ರಮವನ್ನು (ಎಲ್ಲಾ ಎಲೆಕ್ಟಿವ್‌ಗಳನ್ನು ಒಳಗೊಂಡಂತೆ) ಒಳಗೊಂಡಿರುತ್ತದೆ. ಎಲ್ಲಾ ಕೆಸೆಟ್ ವಿಷಯಗಳ ಪಠ್ಯಕ್ರಮವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಅಂತರ್ಜಾಲದಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಕೆಸೆಟ್ ಪರೀಕ್ಷೆಯು 41 ವಿಷಯಗಳಿಗೆ ನಡೆಯಲಿದ್ದು, 41 ವಿಷಯಗಳ ಹೆಸರು, ವಿಷಯಗಳ ಕೋಡ್ ಮತ್ತು ಪ್ರಶ್ನೆ ಪತ್ರಿಕೆಯ ಅವೃತ್ತಿಯ ವಿವರಗಳು ಈ ಕೆಳಕಂಡಂತಿರುತ್ತದೆ.

| ವಿಷಯದ ಕೋಡ್ | ವಿಷಯ | ಪ್ರಶ್ನೆ ಪತ್ರಿಕೆಯ ಅವೃತ್ತಿ |
|---|---|---|
| 1 | ವಾಣಿಜ್ಯ ಶಾಸ್ತ್ರ | ಕನ್ನಡ ಮತ್ತು ಆಂಗ್ಲಭಾಷೆ |
| 2 | ಕನ್ನಡ | ಕನ್ನಡಭಾಷೆ |
| 3 | ಅರ್ಥಶಾಸ್ತ್ರ | ಕನ್ನಡ ಮತ್ತು ಆಂಗ್ಲಭಾಷೆ |
| 4 | ಇಂಗ್ಲೀಷ್ | ಆಂಗ್ಲಭಾಷೆ |
| 5 | ರಾಜ್ಯ ಶಾಸ್ತ್ರ | ಕನ್ನಡ ಮತ್ತು ಆಂಗ್ಲಭಾಷೆ |
| 6 | ಇತಿಹಾಸ | ಕನ್ನಡ ಮತ್ತು ಆಂಗ್ಲಭಾಷೆ |
| 7 | ಸಮಾಜ ಶಾಸ್ತ್ರ | ಕನ್ನಡ ಮತ್ತು ಆಂಗ್ಲಭಾಷೆ |
| 8 | ಭೂಗೋಳ ಶಾಸ್ತ್ರ | ಕನ್ನಡ ಮತ್ತು ಆಂಗ್ಲಭಾಷೆ |
| 9 | ಹಿಂದಿ | ಹಿಂದಿಭಾಷೆ |
| 10 | ನಿರ್ವಹಣೆ (ಮ್ಯಾನೇಜ್‌ಮೆಂಟ್) | ಕನ್ನಡ ಮತ್ತು ಆಂಗ್ಲಭಾಷೆ |
| 11 | ಪ್ರವಾಸೋದ್ಯಮ ಆಡಳಿತ ಮತ್ತು ನಿರ್ವಹಣೆ | ಕನ್ನಡ ಮತ್ತು ಆಂಗ್ಲಭಾಷೆ |
| 12 | ಶಿಕ್ಷಣ | ಕನ್ನಡ ಮತ್ತು ಆಂಗ್ಲಭಾಷೆ |
| 13 | ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನ | ಆಂಗ್ಲಭಾಷೆ |
| 14 | ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ | ಕನ್ನಡ ಮತ್ತು ಆಂಗ್ಲಭಾಷೆ |
| 15 | ಮನೋವಿಜ್ಞಾನ | ಕನ್ನಡ ಮತ್ತು ಆಂಗ್ಲಭಾಷೆ |
| 16 | ಸಮಾಜ ಕಾರ್ಯ | ಕನ್ನಡ ಮತ್ತು ಆಂಗ್ಲಭಾಷೆ |
| 17 | ಅಪರಾಧ ಶಾಸ್ತ್ರ | ಕನ್ನಡ ಮತ್ತು ಆಂಗ್ಲಭಾಷೆ |
| 18 | ಕಾನೂನು | ಕನ್ನಡ ಮತ್ತು ಆಂಗ್ಲಭಾಷೆ |
| 19 | ಸಂಸ್ಕೃತ | ಸಂಸ್ಕೃತಭಾಷೆ |
| 20 | ದೈಹಿಕ ಶಿಕ್ಷಣ | ಕನ್ನಡ ಮತ್ತು ಆಂಗ್ಲಭಾಷೆ |
| 21 | ಜಾನಪದ ಸಾಹಿತ್ಯ | ಕನ್ನಡ ಮತ್ತು ಆಂಗ್ಲಭಾಷೆ |
| 22 | ಉರ್ದು | ಉರ್ದು ಭಾಷೆ |
| 23 | ಸಾರ್ವಜನಿಕ ಆಡಳಿತ | ಕನ್ನಡ ಮತ್ತು ಆಂಗ್ಲಭಾಷೆ |
| 24 | ಗಣಕ ವಿಜ್ಞಾನ ಮತ್ತು ಅನ್ವಯ | ಆಂಗ್ಲಭಾಷೆ |
| 25 | ಭೌತಿಕ ವಿಜ್ಞಾನಗಳು | ಆಂಗ್ಲಭಾಷೆ |
| 26 | ಗಣಿತ ವಿಜ್ಞಾನಗಳು | ಆಂಗ್ಲಭಾಷೆ |
| 27 | ರಸಾಯನಿಕ ವಿಜ್ಞಾನಗಳು | ಆಂಗ್ಲಭಾಷೆ |
| 28 | ಜೀವ ವಿಜ್ಞಾನಗಳು | ಆಂಗ್ಲಭಾಷೆ |
| 29 | ಪರಿಸರ ವಿಜ್ಞಾನಗಳು | ಆಂಗ್ಲಭಾಷೆ |
| 30 | ಗೃಹ ವಿಜ್ಞಾನ | ಆಂಗ್ಲಭಾಷೆ |
| 31 | ವಿದ್ಯುನ್ಮಾನ ವಿಜ್ಞಾನ | ಆಂಗ್ಲಭಾಷೆ |
| 32 | ಭೂ ವಿಜ್ಞಾನ | ಆಂಗ್ಲಭಾಷೆ |
| 33 | ಪುರಾತತ್ವ ಶಾಸ್ತ್ರ (ಆರ್ಕಿಯಾಲಜಿ) | ಕನ್ನಡ ಮತ್ತು ಆಂಗ್ಲಭಾಷೆ |
| 34 | ಮಾನವ ಶಾಸ್ತ್ರ | ಕನ್ನಡ ಮತ್ತು ಆಂಗ್ಲಭಾಷೆ |
| 35 | ಮರಾಠಿ | ಮರಾಠಿಭಾಷೆ |
| 36 | ತತ್ವಶಾಸ್ತ್ರ | ಕನ್ನಡ ಮತ್ತು ಆಂಗ್ಲಭಾಷೆ |
| 37 | ಮಹಿಳಾ ಅಧ್ಯಯನ | ಕನ್ನಡ ಮತ್ತು ಆಂಗ್ಲಭಾಷೆ |
| 38 | ಭಾಷಾ ಶಾಸ್ತ್ರ | ಕನ್ನಡ ಮತ್ತು ಆಂಗ್ಲಭಾಷೆ |
| 39 | ಪ್ರದರ್ಶಕ ಕಲೆಗಳು | ಕನ್ನಡ ಮತ್ತು ಆಂಗ್ಲಭಾಷೆ |
| 40 | ಸಂಗೀತ | ಕನ್ನಡ ಮತ್ತು ಆಂಗ್ಲಭಾಷೆ |
| 41 | ದೃಶ್ಯ ಕಲೆ | ಕನ್ನಡ ಮತ್ತು ಆಂಗ್ಲಭಾಷೆ |

IX) **ಅಭ್ಯರ್ಥಿಗಳು ಕೆಸೆಟ್ ಪರೀಕ್ಷೆ ಬರೆಯುವ ವಿಷಯದಲ್ಲಿ ಯುಜಿಸಿ ನವದೆಹಲಿಯಿಂದ ಮಾನ್ಯತೆ ಪಡೆದ ವಿಶ್ವವಿದ್ಯಾಲಯ/ಸಂಸ್ಥೆಯಿಂದ ಸ್ನಾತಕೋತ್ತರ ಅಥವಾ ಯಾವುದೇ ತತ್ಸಮಾನ ಪದವಿಯನ್ನು ಹೊಂದಿರಬೇಕು.**

**ಸೂಚನೆ:**

1) ಅರ್ಥಶಾಸ್ತ್ರ / ಕೋ–ಆಪರೇಷನ್ ವಿಷಯದಲ್ಲಿ ಮತ್ತು ಇವುಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಎರಡು ವರ್ಷ ಅವಧಿಯ ಸ್ನಾತಕೋತ್ತರ ಪದವಿ ಹೊಂದಿರುವ ಅಭ್ಯರ್ಥಿಗಳು **'ಅರ್ಥಶಾಸ್ತ್ರ'** ದಲ್ಲಿ ಕೆಸೆಟ್ ಪರೀಕ್ಷೆಯನ್ನು ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ.

2) ನಿರ್ವಹಣೆ (ಮ್ಯಾನೇಜ್‌ಮೆಂಟ್) ವಿಷಯದಲ್ಲಿ ಮತ್ತು ಇವುಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಎರಡು ವರ್ಷ ಅವಧಿಯ ಸ್ನಾತಕೋತ್ತರ ಪದವಿ ಅಥವಾ ಪಿ.ಜಿ. ಡಿಪ್ಲೊಮೊ ಇನ್ ಮ್ಯಾನ್ಯೆಜ್‌ಮೆಂಟ್ ಹೊಂದಿರುವ ಅಭ್ಯರ್ಥಿಗಳು **'ನಿರ್ವಹಣೆ' (ಮ್ಯಾನೇಜ್‌ಮೆಂಟ್) ನಲ್ಲಿ** ಕೆಸೆಟ್ ಪರೀಕ್ಷೆಯನ್ನು ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ.

3) ಜಾನಪದ ಸಾಹಿತ್ಯ, ಕನ್ನಡ, ಜಾನಪದ, ಕನ್ನಡ ಜಾನಪದ, ಜಾನಪದ ಸಾಹಿತ್ಯ ಮತ್ತು ಇವುಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಪೂರೈಸಿರುವ ಅಥವಾ ಅಂತಿಮ ವರ್ಷದ ಪರೀಕ್ಷೆಗೆ ಕುಳಿತಿರುವ ಅಭ್ಯರ್ಥಿಗಳು 'ಜಾನಪದ ಸಾಹಿತ್ಯ' ದಲ್ಲಿ **ಕೆಸೆಟ್** ಪರೀಕ್ಷೆಯನ್ನು ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ.

4) ಭೌತಶಾಸ್ತ್ರ /ಎಲೆಕ್ಟ್ರಾನಿಕ್ಸ್ /ಪರಮಾಣು ಮತ್ತು ಅಣು ಭೌತವಿಜ್ಞಾನ /ಕ್ಲಾಸಿಕಲ್ ಡೈನಾಮಿಕ್ಸ್ /ಕಂಡೆನ್ಸಡ್ ಮ್ಯಾಟರ್ ಫಿಜಿಕ್ಸ್/ ಎಲೆಕ್ಟೋಮ್ಯಾಗ್ನೆಟಿಕ್/ ಎಕ್ಸ್‌ಪಿರಿಮೆಂಟಲ್ ಡಿಸೈನ್/ ನ್ಯೂಕ್ಲಿಯರ್, ಸ್ಪೈಸ್ ಅಚಿಡ್ ಪ್ರಾಕ್ಟೀಕಲ್ ಫಿಜಿಕ್ಸ್/ ಕ್ವಾಂಟಮ್ ಫಿಜಿಕ್ಸ್/ಥೆರ್ಮೊಡೈನಾಮಿಕ್ಸ್, ಅಸ್ಟೋನಾಮಿ, ಅಸ್ಟ್ರೋಫಿಜಿಕ್ಸ್ / ಮೆಟಿರೀಯಲ್ ಸೈನ್ಸ್ ಮತ್ತು ಇತರೆ ಸಂಬಂಧಿಸಿದ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಪೂರೈಸಿರುವ ಅಥವಾ ಅಂತಿಮ ವರ್ಷದ ಪರೀಕ್ಷೆಗೆ ಕುಳಿತಿರುವ ಅಭ್ಯರ್ಥಿಗಳು ಕೆಸೆಟ್ ಪರೀಕ್ಷೆಯನ್ನು **'ಭೌತಿಕ ವಿಜ್ಞಾನ'ದಲ್ಲಿ** ಪರೀಕ್ಷೆ ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ.

5) ಯಾವ ಅಭ್ಯರ್ಥಿಗಳು ಶುದ್ಧ ಗಣಿತ ವಿಜ್ಞಾನ / ಸಂಖ್ಯಾಶಾಸ್ತ್ರ/ ಆನ್ವಯಿಕ ಗಣಿತ ವಿಜ್ಞಾನ /ಗಣಿತ ಮತ್ತು ಗಣಕ ವಿಜ್ಞಾನ ಮತ್ತು ಇತರೆ ಸಂಬಂಧಿಸಿದ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಪೂರೈಸಿರುವ ಅಥವಾ ಅಂತಿಮ ವರ್ಷದ ಪರೀಕ್ಷೆಗೆ ಕುಳಿತಿರುವ ಅಭ್ಯರ್ಥಿಗಳು ಕೆಸೆಟ್ ಪರೀಕ್ಷೆಯನ್ನು **'ಗಣಿತ ವಿಜ್ಞಾನ'ದಲ್ಲಿ** ಪರೀಕ್ಷೆ ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ.

6) ರಾಸಾಯನಿಕ ವಿಜ್ಞಾನಗಳು / ವಿಶ್ಲೇಷಣಾತ್ಮಕ ರಾಸಾಯನ ವಿಜ್ಞಾನ/ ಇನಾರ್ಗ್ಯಾನಿಕ್ (ನಿರವಯವ) / ರಸಾಯನಿಕ ವಿಜ್ಞಾನ / ಆರ್ಗ್ಯಾನಿಕ್ (ಸವಯವ) ರಸಾಯನ ವಿಜ್ಞಾನ/ ಭೌತ ರಸಾಯನ ವಿಜ್ಞಾನ/ ಮೆಡಿಸಿನಲ್ ಕೆಮಿಸ್ಟ್ರಿ/ ಅನ್ವಯಿಕ ರಾಸಾಯನ ಶಾಸ್ತ್ರ / ನ್ಯೂಕ್ಲಿಯರ್ ಕೆಮಿಸ್ಟ್ರಿ / ಪರಿಸರ ರಸಾಯನ ಶಾಸ್ತ್ರ / ಮೆರೈನ್ ಕೆಮಿಸ್ಟ್ರಿ / ಪಾರ್ಮಾಸಿಟಿಕಲ್ ಕೆಮಿಸ್ಟ್ರಿ / ಬಯೋ–ಆರ್ಗಾನಿಕ್ ಕೆಮಿಸ್ಟ್ರಿ ಮತ್ತು ಇತರೆ ಸಂಬಂಧಿಸಿದ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಪೂರೈಸಿರುವ ಅಥವಾ ಅಂತಿಮ ವರ್ಷದ ಪರೀಕ್ಷೆಗೆ ಕುಳಿತಿರುವ ಅಭ್ಯರ್ಥಿಗಳು ಕೆಸೆಟ್ ಪರೀಕ್ಷೆಯನ್ನು **'ರಸಾಯನಿಕ ವಿಜ್ಞಾನ'ದಲ್ಲಿ** ಪರೀಕ್ಷೆ ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ.

7) ಜೀವ ರಾಸಾಯನ ವಿಜ್ಞಾನ / ಜೀವ ವಿಜ್ಞಾನ/ ಜೈವಿಕ ತಂತ್ರಜ್ಞಾನ/ಜೀವವೈವಿಧ್ಯತೆ ಮತ್ತು Taxonoy/ ಸಸ್ಯವಿಜ್ಞಾನ/ Genetic/ ಮೈಕ್ರೋಬಯಾಲಜಿ/ Physiology/ ಪ್ರಾಣಿ ವಿಜ್ಞಾನ/ ಫಿಶರಿಸೈನ್ಸ್/ ಅನಿಮಲ್ ಬಯೋಲಾಜಿ/ ಮೆರೈನ್ ಬಯೋಲಜಿ/ ಅಪ್ಲೈಡ್ ಜೆನೆಟಿಕ್ಸ್ / ಸೆರಿಕಲ್ಚರ್ ಮತ್ತು ಸಂಬಂಧಿಸಿದ ಇತರೆ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಪೂರೈಸಿರುವ ಅಥವಾ ಅಂತಿಮ ವರ್ಷದ ಪರೀಕ್ಷೆಗೆ ಕುಳಿತಿರುವ ಅಭ್ಯರ್ಥಿಗಳು ಕೆಸೆಟ್ ಪರೀಕ್ಷೆಯನ್ನು **'ಜೈವಿಕ ವಿಜ್ಞಾನ'ದಲ್ಲಿ** ಪರೀಕ್ಷೆ ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ.

8) ಭೂ ವಿಜ್ಞಾನ/ಅನ್ವಯಿಕ ಭೂ ವಿಜ್ಞಾನ/ ಭೂ ಭೌತವಿಜ್ಞಾನ (ಜಿಯೋ ಫಿಸಿಕ್ಸ್) / ಹವಾಮಾನ ವಿಜ್ಞಾನ / ಸಾಗರ ವಿಜ್ಞಾನ / ಫಿಜಿಕಲ್ ಜಿಯೋಗ್ರಾಫಿ / ಎಂ.ಎಸ್. ಜಿಯೋಲಾಜಿ / ಭೂ ವಿಜ್ಞಾನ ಸಂಪನ್ಮೂಲ ಮತ್ತು ಸಾಗರ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ / ಪೆಟ್ರೋಲಿಯಂ ಜಿಯೋಲಾಜಿ / ಜಿಯೋಇನ್‌ಫಾರ್‌ಮ್ಯಾಟಿಕ್ಸ್/ ಅಪ್ಲೈಡ್ ಜಿಯೋಕೆಮಿಸ್ಟ್ರಿ / ಮತ್ತು ಸಂಬಂಧಿಸಿದ ಇತರೆ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಪೂರೈಸಿರುವ ಅಥವಾ ಅಂತಿಮ ವರ್ಷದ ಪರೀಕ್ಷೆಗೆ ಕುಳಿತಿರುವ ಅಭ್ಯರ್ಥಿಗಳು ಕೆಸೆಟ್ ಪರೀಕ್ಷೆಯನ್ನು **'ಭೂ ವಿಜ್ಞಾನ'ದಲ್ಲಿ** ಪರೀಕ್ಷೆ ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ.

9) ಪುರಾತತ್ವ ಶಾಸ್ತ್ರ (ಆರ್ಕಿಯಾಲಜಿ) ವಿಷಯದಲ್ಲಿ ಮತ್ತು ಇವುಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಎರಡು ವರ್ಷ ಅವಧಿಯ ಸ್ನಾತಕೋತ್ತರ ಪದವಿ ಹೊಂದಿರುವ ಅಭ್ಯರ್ಥಿಗಳು **'ಪುರಾತತ್ವ ಶಾಸ್ತ್ರ'** (ಆರ್ಕಿಯಾಲಜಿ)ದಲ್ಲಿ ಕೆಸೆಟ್ ಪರೀಕ್ಷೆಯನ್ನು ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ.

10) ಮಹಿಳಾ ಅಧ್ಯಯನ / ಗ್ರಾಮೀಣ ಅಭಿವೃದ್ಧಿ, ಮಾನವಿಕ / ಸಮಾಜ ವಿಜ್ಞಾನ ಹಾಗೂ ಭಾಷಾ ವಿಷಯಗಳಲ್ಲಿ ಎರಡು ವರ್ಷ ಅವಧಿಯ ಸ್ನಾತಕೋತ್ತರ ಪದವಿ ಹೊಂದಿರುವ ಅಭ್ಯರ್ಥಿಗಳು **'ಮಹಿಳಾ ಅಧ್ಯಯನ'**ದಲ್ಲಿ ಕೆಸೆಟ್ ಪರೀಕ್ಷೆಯನ್ನು ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ.

**ಸೂಚನೆ :** ಒಂದಕ್ಕಿಂತ ಹೆಚ್ಚು ಸ್ನಾತಕೋತ್ತರ ಪದವಿ ಪಡೆದಿರುವ ಅಭ್ಯರ್ಥಿಗಳು, ಯಾವುದಾದರೂ ಒಂದು ವಿಷಯದಲ್ಲಿ ಮಾತ್ರ ಕೆಸೆಟ್ (KSET) ಪರೀಕ್ಷೆಯನ್ನು ತೆಗೆದುಕೊಳ್ಳಬಹುದು. ಅಭ್ಯರ್ಥಿಗಳು ಪರೀಕ್ಷಾ ವಿಷಯವನ್ನು ಆಯ್ಕೆ ಮಾಡಿ ಅರ್ಜಿ ಸಲ್ಲಿಸಿದ ನಂತರ ಯಾವುದೇ ಕಾರಣಕ್ಕೂ ವಿಷಯಗಳ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.

X) **ಪರೀಕ್ಷಾ ಕೇಂದ್ರಗಳು :**

i) ಭಾಗ–ಎ ಯಲ್ಲಿ ನೀಡಲಾದ ಆಯ್ದ 18 ವಿಷಯಗಳಿಗೆ ಕೆಸೆಟ್ (KSET) ಪರೀಕ್ಷೆಯನ್ನು ಕರ್ನಾಟಕ ರಾಜ್ಯದ ಈ ಕೆಳಕಂಡ ಎಲ್ಲಾ 08 ಪರೀಕ್ಷಾ ಕೇಂದ್ರಗಳಲ್ಲಿ ನಡೆಸಲಾಗುತ್ತಿದ್ದು, ಅಭ್ಯರ್ಥಿಗಳು ಯಾವುದಾದರೂ ಒಂದು ಪರೀಕ್ಷಾ ಕೇಂದ್ರವನ್ನು ಮಾತ್ರ ಆಯ್ಕೆ ಮಾಡಿಕೊಳ್ಳಬೇಕು.

**'ಭಾಗ ಎ'**

| ಕ್ರಮ ಸಂಖ್ಯೆ | ವಿಷಯ ಕೋಡ್ | ವಿಷಯ | ಪ್ರಶ್ನೆ ಪತ್ರಿಕೆಯ ಮಾಧ್ಯಮ | ಪರೀಕ್ಷಾ ಕೇಂದ್ರ ವಿವರ |
|---|---|---|---|---|
| 1 | 01 | ವಾಣಿಜ್ಯ ಶಾಸ್ತ್ರ | ಆಂಗ್ಲಭಾಷೆ | 1 ಬೆಂಗಳೂರು<br>2 ಬಳ್ಳಾರಿ<br>3 ವಿಜಯಪುರ<br>4 ದಾವಣಗೆರೆ<br>5 ಧಾರವಾಡ<br>6 ಕಲಬುರಗಿ<br>7 ಮಂಗಳೂರು<br>8 ಮೈಸೂರು |
| 2 | 02 | ಕನ್ನಡ | ಕನ್ನಡ ಮತ್ತು ಆಂಗ್ಲಭಾಷೆ | |
| 3 | 03 | ಅರ್ಥಶಾಸ್ತ್ರ | ಆಂಗ್ಲಭಾಷೆ | |
| 4 | 04 | ಇಂಗ್ಲೀಷ್ | ಕನ್ನಡ ಮತ್ತು ಆಂಗ್ಲಭಾಷೆ | |
| 5 | 05 | ರಾಜ್ಯ ಶಾಸ್ತ್ರ | ಕನ್ನಡ ಮತ್ತು ಆಂಗ್ಲಭಾಷೆ | |
| 6 | 06 | ಇತಿಹಾಸ | ಆಂಗ್ಲಭಾಷೆ | |
| 7 | 07 | ಸಮಾಜ ಶಾಸ್ತ್ರ | ಹಿಂದಿಭಾಷೆ | |
| 8 | 09 | ಹಿಂದಿ | ಕನ್ನಡ ಮತ್ತು ಆಂಗ್ಲಭಾಷೆ | |
| 9 | 10 | ನಿರ್ವಹಣೆ (ಮ್ಯಾನೇಜ್‌ಮೆಂಟ್) | ಕನ್ನಡಭಾಷೆ | |
| 10 | 12 | ಶಿಕ್ಷಣ | ಆಂಗ್ಲಭಾಷೆ | |
| 11 | 13 | ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನ | ಆಂಗ್ಲಭಾಷೆ | |
| 12 | 16 | ಸಮಾಜ ಕಾರ್ಯ | ಕನ್ನಡ ಮತ್ತು ಆಂಗ್ಲಭಾಷೆ | |
| 13 | 20 | ದೈಹಿಕ ಶಿಕ್ಷಣ | ಆಂಗ್ಲಭಾಷೆ | |
| 14 | 24 | ಗಣಕ ವಿಜ್ಞಾನ ಮತ್ತು ಅನ್ವಯ | ಕನ್ನಡ ಮತ್ತು ಆಂಗ್ಲಭಾಷೆ | |
| 15 | 25 | ಭೌತಿಕ ವಿಜ್ಞಾನಗಳು | ಆಂಗ್ಲಭಾಷೆ | |
| 16 | 26 | ಗಣಿತ ವಿಜ್ಞಾನಗಳು | ಕನ್ನಡ ಮತ್ತು ಆಂಗ್ಲಭಾಷೆ | |
| 17 | 27 | ರಸಾಯನಿಕ ವಿಜ್ಞಾನಗಳು | ಕನ್ನಡ ಮತ್ತು ಆಂಗ್ಲಭಾಷೆ | |
| 18 | 28 | ಜೀವ ವಿಜ್ಞಾನಗಳು | ಕನ್ನಡ ಮತ್ತು ಆಂಗ್ಲಭಾಷೆ | |

ii) ಭಾಗ–ಬಿ ಯಲ್ಲಿ ನೀಡಲಾಗಿರುವ 23 ವಿಷಯಗಳಿಗೆ ಅಭ್ಯರ್ಥಿಗಳು ಕೇವಲ ಬೆಂಗಳೂರು ಪರೀಕ್ಷಾ ಕೇಂದ್ರವನ್ನು ಮಾತ್ರ ಆಯ್ಕೆ ಮಾಡಿಕೊಳ್ಳತಕ್ಕದ್ದು.

**'ಭಾಗ ಬಿ'**

| ಕ್ರಮ ಸಂಖ್ಯೆ | ವಿಷಯ ಕೋಡ್ | ವಿಷಯ | ಪ್ರಶ್ನೆ ಪತ್ರಿಕೆಯ ಮಾಧ್ಯಮ | ಪರೀಕ್ಷಾ ಕೇಂದ್ರ ವಿವರ |
|---|---|---|---|---|
| 1 | 08 | ಭೂಗೋಳ ಶಾಸ್ತ್ರ | ಕನ್ನಡ ಮತ್ತು ಆಂಗ್ಲಭಾಷೆ | |
| 2 | 11 | ಪ್ರವಾಸೋದ್ಯಮ ಆಡಳಿತ ಮತ್ತು ನಿರ್ವಹಣೆ | ಕನ್ನಡ ಮತ್ತು ಆಂಗ್ಲಭಾಷೆ | |
| 3 | 14 | ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ | ಕನ್ನಡ ಮತ್ತು ಆಂಗ್ಲಭಾಷೆ | |
| 4 | 15 | ಮನೋವಿಜ್ಞಾನ | ಆಂಗ್ಲಭಾಷೆ | |
| 5 | 17 | ಅಪರಾಧ ಶಾಸ್ತ್ರ | ಆಂಗ್ಲಭಾಷೆ | |
| 6 | 18 | ಕಾನೂನು | ಆಂಗ್ಲಭಾಷೆ | |
| 7 | 19 | ಸಂಸ್ಕೃತ | ಕನ್ನಡ ಮತ್ತು ಆಂಗ್ಲಭಾಷೆ | |
| 8 | 21 | ಜಾನಪದ ಸಾಹಿತ್ಯ | ಕನ್ನಡ ಮತ್ತು ಆಂಗ್ಲಭಾಷೆ | |
| 9 | 22 | ಉರ್ದು | ಆಂಗ್ಲಭಾಷೆ | |
| 10 | 23 | ಸಾರ್ವಜನಿಕ ಆಡಳಿತ | ಕನ್ನಡ ಮತ್ತು ಆಂಗ್ಲಭಾಷೆ | |
| 11 | 29 | ಪರಿಸರ ವಿಜ್ಞಾನಗಳು | ಕನ್ನಡ ಮತ್ತು ಆಂಗ್ಲಭಾಷೆ | |
| 12 | 30 | ಗೃಹ ವಿಜ್ಞಾನ | ಮರಾಠಿಭಾಷೆ | **ಬೆಂಗಳೂರು** |
| 13 | 31 | ವಿದ್ಯುನ್ಮಾನ ವಿಜ್ಞಾನ | ಕನ್ನಡ ಮತ್ತು ಆಂಗ್ಲಭಾಷೆ | |
| 14 | 32 | ಭೂ ವಿಜ್ಞಾನ | ಕನ್ನಡ ಮತ್ತು ಆಂಗ್ಲಭಾಷೆ | |
| 15 | 33 | ಪುರಾತತ್ವ ಶಾಸ್ತ್ರ (ಆರ್ಕಿಯಾಲಜಿ) | ಕನ್ನಡ ಮತ್ತು ಆಂಗ್ಲಭಾಷೆ | |
| 16 | 34 | ಮಾನವ ಶಾಸ್ತ್ರ | ಕನ್ನಡ ಮತ್ತು ಆಂಗ್ಲಭಾಷೆ | |
| 17 | 35 | ಮರಾಠಿ | ಕನ್ನಡ ಮತ್ತು ಆಂಗ್ಲಭಾಷೆ | |
| 18 | 36 | ತತ್ವಶಾಸ್ತ್ರ | ಕನ್ನಡ ಮತ್ತು ಆಂಗ್ಲಭಾಷೆ | |
| 19 | 37 | ಮಹಿಳಾ ಅಧ್ಯಯನ | ಸಂಸ್ಕೃತಭಾಷೆ | |
| 20 | 38 | ಭಾಷಾ ಶಾಸ್ತ್ರ | ಕನ್ನಡ ಮತ್ತು ಆಂಗ್ಲಭಾಷೆ | |
| 21 | 39 | ಪ್ರದರ್ಶಕ ಕಲೆಗಳು | ಉರ್ದು ಭಾಷೆ | |
| 22 | 40 | ಸಂಗೀತ | ಕನ್ನಡ ಮತ್ತು ಆಂಗ್ಲಭಾಷೆ | |
| 23 | 41 | ದೃಶ್ಯ ಕಲೆ | ಕನ್ನಡ ಮತ್ತು ಆಂಗ್ಲಭಾಷೆ | |

**ಟಿಪ್ಪಣಿ : ವಿದ್ಯಾರ್ಥಿಯು ಒಮ್ಮೆ ಪರೀಕ್ಷಾ ಕೇಂದ್ರವನ್ನು ಆಯ್ಕೆ ಮಾಡಿದ ನಂತರ, ಪರೀಕ್ಷಾ ಕೇಂದ್ರದ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.**

XI) **ಅರ್ಜಿಯನ್ನು ಸಲ್ಲಿಸುವ ವಿಧಾನ :**

ಕೆಸೆಟ್ 2023ಕ್ಕೆ ಪರೀಕ್ಷೆ ಬರೆಯಲು ಬಯಸುವ ಅಭ್ಯರ್ಥಿಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್ https://kea.kar.nic.in ನಲ್ಲಿ ಆನ್‌ಲೈನ್ ಅರ್ಜಿ ಸಲ್ಲಿಸಬೇಕು

1. ಅರ್ಜಿ ಸಲ್ಲಿಕೆ.
2. ಫೋಟೋ ಮತ್ತು ಸಹಿ ಅಪ್ಲೋಡ್.
3. ಶುಲ್ಕ ಪಾವತಿ.
4. ಅರ್ಜಿ ಮುದ್ರಿಸುವುದು.

ಸೂಚನೆ : ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಾಗ ಯಾವುದೇ ರೀತಿಯ ಅನಾನುಕೂಲತೆ ಅಥವಾ ಕೊನೆಯ ನಿಮಿಷದ ತೊಂದರೆಗಳ ಅಥವಾ ಅನಿರೀಕ್ಷಿತ ತೊಂದರೆಗಳನ್ನು ತಪ್ಪಿಸಲು, ಅಭ್ಯರ್ಥಿಗಳು ಕೊನೆಯ ದಿನಾಂಕಕ್ಕಾಗಿ ಕಾಯದೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಂತೆ ಸೂಚಿಸಲಾಗಿದೆ.

**(ಗಮನಿಸಿ: ಎಲ್ಲಾ ಸ್ಕ್ಯಾನ್ ಮಾಡಿದ ಪ್ರತಿಗಳು JPEG ಸ್ವರೂಪದಲ್ಲಿರಬೇಕು. ಆನ್‌ಲೈನ್ ಅಪ್ಲಿಕೇಷನ್ ವ್ಯವಸ್ಥೆಯು ನಿರ್ದಿಷ್ಟಪಡಿಸಿದ ಗಾತ್ರಗಳಿಗಿಂತ ಚಿಕ್ಕದಾದ / ದೊಡ್ಡದಾದ ಫೈಲ್‌ಗಳನ್ನು ಅಪ್‌ಲೋಡ್ ಮಾಡಲು ಅನುಮತಿಸುವುದಿಲ್ಲ.**

XII) **ಸಾಮಾನ್ಯ ಸೂಚನೆಗಳು:**

1. ಅಭ್ಯರ್ಥಿಗಳು ಪ್ರವೇಶ ಪತ್ರವನ್ನು ಪ್ರಾಧಿಕಾರದ ವೆಬ್‌ಸೈಟಿನಿಂದ ಡೌನ್‌ಲೋಡ್ ಮಾಡಿಕೊಳ್ಳಬೇಕು. ಅದರಲ್ಲಿ ಮುದ್ರಿತವಾಗಿರುವ ಎಲ್ಲಾ ವಿವರಗಳನ್ನು ಪರಿಶೀಲಿಸಿ ಪರೀಕ್ಷಾ ಕೇಂದ್ರವನ್ನು ಖಚಿತಪಡಿಸಿಕೊಳ್ಳಬೇಕು.
2. ಪ್ರವೇಶ ಪತ್ರದ ಜೊತೆಯಲ್ಲಿ ಡೌನ್‌ಲೋಡ್ ಮಾಡಿಕೊಳ್ಳುವ ಸೂಚನೆಗಳನ್ನು ತಪ್ಪದೆ ಓದಿ.
3. ತಪ್ಪು ಉತ್ತರಗಳಿಗೆ ಅಂಕಗಳನ್ನು ಕಳೆಯುವುದಿಲ್ಲ.
4. ಕೇವಲ ಕೆಸೆಟ್–2023ಕ್ಕೆ ಹಾಜರಾದ ಮಾತ್ರಕ್ಕೆ ಅರ್ಹತೆಯನ್ನು ಪಡೆದಿದ್ದೇನೆಂದು ಅಭ್ಯರ್ಥಿಗಳು ಭಾವಿಸಬಾರದು.
5. ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯ ಒಳಗೆ ಯಾವುದೇ ಆಧುನಿಕ ಎಲೆಕ್ಟ್ರಾನಿಕ್ ಉಪಕರಣಗಳು, ಮೊಬೈಲ್ ಫೋನ್, ಬ್ಲೂಟೂಥ್, ಸ್ಲೈಡ್ ರೂಲ್ಸ್, ಕ್ಯಾಲ್ಕ್ಯುಲೇಟರ್, ವೈಟ್ ಫ್ಲ್ಯೂಯಿಡ್, ವೈರ್‌ಲೆಸ್ ಸೆಟ್ಸ್, ಪೇಪರ್ ಚೀಟಿ, ಬುಕ್ಸ್ / ಪುಸ್ತಕ ಇತ್ಯಾದಿಗಳನ್ನು ತರುವುದನ್ನು ನಿಷೇಧಿಸಲಾಗಿದೆ. ಅಲ್ಲದೆ ಈ ಮೇಲಿನ ಯಾವುದೇ ವಸ್ತುಗಳನ್ನು ಸಂರಕ್ಷಿಸಿಡಲು ಪರೀಕ್ಷಾ ಕೇಂದ್ರಗಳಲ್ಲಿ ವ್ಯವಸ್ಥೆ ಇರುವುದಿಲ್ಲ.
6. ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯ ಒಳಗೆ ಯಾವುದೇ ರೀತಿಯ ಕೈಗಡಿಯಾರವನ್ನು ಕಟ್ಟಿಕೊಂಡು / ತೆಗೆದುಕೊಂಡು ಹೋಗುವಂತಿಲ್ಲ. ವಿವಿಧ ಸಮಯಗಳಲ್ಲಿ ಬಾರಿಸುವ ಗಂಟೆಗಳ ವಿವರಗಳಿಗಾಗಿ ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಚುರ ಪಡಿಸಿರುವ ಬೆಲ್ ಸಮಯವನ್ನು ನೋಡಲು ಕೋರಿದೆ.
7. ಯಾವುದೇ ರೀತಿಯ ಲೋಹದ ಆಭರಣಗಳನ್ನು ಧರಿಸಿಕೊಂಡು ಬರುವುದನ್ನು ನಿಷೇಧಿಸಿದೆ. (ಮಂಗಳ ಸೂತ್ರವನ್ನು ಹೊರತುಪಡಿಸಿ)
8. ಅಭ್ಯರ್ಥಿತನವು ಸಂಪೂರ್ಣವಾಗಿ ತಾತ್ಕಾಲಿಕವಾಗಿರುತ್ತದೆ ಎಂಬುದನ್ನು ಗಮನಿಸಬೇಕು. ಕೇವಲ ಪ್ರವೇಶ ಪತ್ರವನ್ನು ನೀಡಿದ ಮಾತ್ರಕ್ಕೆ ಹಾಗು ಪರೀಕ್ಷೆಗೆ ಹಾಜರಾಗಲು ಅನುಮತಿ ನೀಡಿದ ಮಾತ್ರಕ್ಕೆ, ಪ್ರಾಧಿಕಾರವು ಅಭ್ಯರ್ಥಿಗಳ ವಿವರವನ್ನು ಒಪ್ಪಿದೆಯೆಂದು ಪರಗಣಿಸಬಾರದು.
9. ಅಭ್ಯರ್ಥಿಗಳು ಮೊಣಕೈವರೆಗೆ ಬರುವಂತಹ ಅರ್ಧ ತೋಳಿನ ಉಡುಪುಗಳನ್ನು ಧರಿಸಿ ಪರೀಕ್ಷೆಗೆ ಹಾಜರಾಗಬಹುದು, ಕಿವಿ, ತಲೆ ಮುಚ್ಚುವಂತಹ ವಸ್ತ್ರವನ್ನು ನಿಷೇಧಿಸಲಾಗಿದೆ.
10. ಪ್ರವೇಶ ಪತ್ರದ ಜೊತೆಯಲ್ಲಿ ಅಭ್ಯರ್ಥಿಯು ಕಡ್ಡಾಯವಾಗಿ ಸರ್ಕಾರದಿಂದ ಮಾನ್ಯತೆ ಇರುವ ಭಾವಚಿತ್ರವುಳ್ಳ ಯಾವುದಾದರು ಒಂದು, ಗುರುತಿನ ಚೀಟಿ / ಡ್ರೈವಿಂಗ್ ಲೈಸೆನ್ಸ್ / ಪಾಸ್‌ಪೋರ್ಟ್ / ಆಧಾರ್ ಕಾರ್ಡ್ / ಪಾನ್ ಕಾರ್ಡ್ ಅನ್ನು ತೆಗೆದುಕೊಂಡು ಹೋಗಬೇಕು.
11. ಕೊಠಡಿ ಮೇಲ್ವಿಚಾರಕರು ನೀಡುವ ಎಲ್ಲಾ ಸೂಚನೆಗಳನ್ನು ತಪ್ಪದೇ ಪಾಲಿಸಬೇಕು. ಸೂಚನೆಗಳನ್ನು ಪಾಲಿಸದೇ ಇರುವ ಅಭ್ಯರ್ಥಿಗಳನ್ನು ಅನ್ಯಾಯದ ವಿಧಾನವೆಂದು ಪರಿಗಣಿಸಿ ಅಂತಹ ಅಭ್ಯರ್ಥಿಗಳ ಫಲಿತಾಂಶವನ್ನು ತಡೆಹಿಡಿಯಲಾಗುವುದು.
12. ಪ್ರವೇಶ ಪತ್ರದಲ್ಲಿ ನಮೂದಿಸಿರುವ ಸೂಚನೆಗಳನ್ನು ಗಮನವಿಟ್ಟು ಓದಿಕೊಳ್ಳಬೇಕು.
13. ಪ್ರವೇಶ ಪತ್ರದಲ್ಲಿ ನಿಗದಿಪಡಿಸಿರುವ ಪರೀಕ್ಷಾ ಕೇಂದ್ರವನ್ನು ಹೊರತುಪಡಿಸಿ ಬೇರೆ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆಯನ್ನು ಬರೆಯಲು ಅಭ್ಯರ್ಥಿಗಳಿಗೆ ಅನುವು ಮಾಡಿಕೊಡುವುದಿಲ್ಲ.
14. ಓಎಂಆರ್ ಉತ್ತರ ಪತ್ರಿಕೆಯ ಮೇಲೆ ಅಗತ್ಯ ಮಾಹಿತಿಯನ್ನು ಹೊರತು ಪಡಿಸಿ, ಬೇರೆ ಯಾವುದೇ ಮಾಹಿತಿಯನ್ನು ಬರೆಯುವ ಕಾರಣದಿಂದ ಅಭ್ಯರ್ಥಿಯ ಗುರುತಿನ ವಿವರಗಳು ಬಹಿರಂಗವಾಗುವ ಸಾಧ್ಯತೆ ಇರುವುದರಿಂದ, ಅಥವಾ ಉತ್ತರಪತ್ರಿಕೆಯ ಮೇಲೆ ದುರುಪಯೋಗವಾದ ಭಾಷೆಯನ್ನು ಬಳಸುವುದು ಅಥವಾ ಅನ್ಯಾಯದ ವಿಧಾನವನ್ನು ಅನುಸರಿಸುವುದು ಅಥವಾ ನಮೂದಿಸಿರುವ ಉತ್ತರಗಳನ್ನು ವಿವಿಧ ಸಾಧನಗಳಿಂದ ಹೊಡೆದು ಹಾಕಲು ಪ್ರಯತ್ನಿಸುವುದು; ಇಂತಹ ಪ್ರಕರಣಗಳಲ್ಲಿ ಅಭ್ಯರ್ಥಿಗಳು ಅನರ್ಹತೆಯನ್ನು ಹೊಂದುತ್ತಾರೆ.
15. ಕನ್ನಡ ಮತ್ತು ಇಂಗ್ಲೀಷ್ ಆವೃತ್ತಿಗಳ ಪ್ರಶ್ನೆ ಪತ್ರಿಕೆಗಳಲ್ಲಿ ಯಾವುದೇ ರೀತಿಯ ವ್ಯತ್ಯಾಸಗಳು ಕಂಡುಬಂದಲ್ಲಿ, ಇಂಗ್ಲೀಷ್ ಆವೃತ್ತಿಗಳಲ್ಲಿರುವುದೇ ಅಂತಿಮವೆಂದು ಪರಿಗಣಿಸಬೇಕು.
16. ವಿಶೇಷ ಚೇತನ ಅಭ್ಯರ್ಥಿಗಳಿಗೆ, ಸರ್ಕಾರದ ಆದೇಶದಂತೆ ಪ್ರತಿಕೆ–I ಕ್ಕೆ 20 ನಿಮಿಷಗಳನ್ನು ಹಾಗೂ ಪ್ರತಿಕೆ–II ಕ್ಕೆ 40 ನಿಮಿಷಗಳ ಹೆಚ್ಚುವರಿ ಸಮಯವನ್ನು ನೀಡಲಾಗುವುದು.
17. ಲಿಪಿಕಾರರ ಸಹಾಯ ಬಯಸುವ ವಿಶೇಷ ಚೇತನ ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟ್‌ನ್ನು ಗಮನಿಸುವುದು.

## XIII) ಪರೀಕ್ಷಾ ಮಾಹಿತಿ

1. ಅಭ್ಯರ್ಥಿಗಳಿಗೆ ಕೆಸೆಟ್ ಪರೀಕ್ಷೆಯ ಪೂರ್ಣಮಾಹಿತಿಯನ್ನು ಕೆಇಎ ಅಂತರ್ಜಾಲದಲ್ಲಿ ಅಭ್ಯರ್ಥಿಯ ಮಾರ್ಗದರ್ಶನ, ಮಾದರಿ ಓ.ಎಮ್.ಆರ್ ಮತ್ತು ಅದನ್ನು ಬಳಸುವ ರೀತಿಯನ್ನು ತಿಳಿಸಲಾಗಿರುತ್ತದೆ ಹಾಗೂ ಅಭ್ಯರ್ಥಿಗಳಿಗೆ ಅಂಚೆ ಮೂಲಕ ಯಾವುದೇ ಮಾಹಿತಿಯ ಪ್ರತಿಯನ್ನು ನೀಡಲಾಗುವುದಿಲ್ಲ.
2. ಮರುಮೌಲ್ಯಮಾಪನಕ್ಕೆ ಅಥವಾ ಮರು ಎಣಿಕೆಗೆ ಅವಕಾಶವಿರುವುದಿಲ್ಲ.
3. ಕೆಸೆಟ್ ಪರೀಕ್ಷೆಯ ತಾತ್ಕಾಲಿಕ ಕೀ ಉತ್ತರಗಳನ್ನು ಕೆಇಎ ಅಂತರ್ಜಾಲದಲ್ಲಿ ಪರೀಕ್ಷೆ ಮುಗಿದ ನಂತರ ಪ್ರಕಟಿಸಲಾಗುವುದು. ತಾತ್ಕಾಲಿಕ ಕೀ ಉತ್ತರಗಳಲ್ಲಿ ತೃಪ್ತಿ ಹೊಂದದ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಮೂಲಕ ಆಕ್ಷೇಪಣೆ ಹಾಕಬಹುದು. ಪ್ರತಿ ಪ್ರಶ್ನೆಗೆ ರೂ.300/– ಮೊತ್ತವನ್ನು ಪಾವತಿಸಬೇಕು ಮತ್ತು ಆಕ್ಷೇಪಿಸಲಾದ ಕೀ ಉತ್ತರ ಸರಿಯಾಗಿದ್ದರೆ ಅಂತಹ ಅಭ್ಯರ್ಥಿಗಳಿಗೆ ಶುಲ್ಕವನ್ನು ಮರುಪಾವತಿಸಲಾಗುವುದು.
4. ಆಕ್ಷೇಪಣೆಗಳ ಮೇಲಿನ ಕೆಇಎ ನಿರ್ಧಾರವೇ ಅಂತಿಮವಾಗಿರುತ್ತದೆ ಮತ್ತು ಅಂತಿಮ ಉತ್ತರ ಕೀ ಗಳ ಆಧಾರದ ಮೇಲೆ ಉತ್ತರಗಳನ್ನು ಅಂತರ್ಜಾಲದಲ್ಲಿ ಪ್ರಕಟಿಸಿ ನಂತರ ಅಂತಿಮ ಕೆಸೆಟ್ ಫಲಿತಾಂಶ ವನ್ನು ಪ್ರಕಟಿಸಲಾಗುವುದು.
5. ಅಭ್ಯರ್ಥಿಗಳು ಕೆಸೆಟ್ ಪರೀಕ್ಷೆಗೆ ಸಂಬಂಧಪಟ್ಟಂತೆ ಬಿಡುಗಡೆಗೊಳಿಸಿದ ಕೀ ಉತ್ತರಗಳು ಅಂತಿಮವಾಗಿದ್ದು, ಅಂತಿಮ ಕೀ ಉತ್ತರಗಳನ್ನು ಪ್ರಕಟಿಸಿದ ನಂತರ ಅಭ್ಯರ್ಥಿಗಳು ಪುನಃ ಆಕ್ಷೇಪಣೆಯನ್ನು ಸಲ್ಲಿಸಲು ಅವಕಾಶವಿರುವುದಿಲ್ಲ.
6. ಎಲ್ಲಾ ವಿಷಯದಲ್ಲೂ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ನಿರ್ಣಯವೇ ಅಂತಿಮವಾಗಿರುತ್ತದೆ.
7. ಕೆಇಎ ಅರ್ಹರಾದ / ಅನರ್ಹಗೊಂಡ ಅಭ್ಯರ್ಥಿಗಳಿಗೆ ಯಾವುದೇ ಅಂಕಪಟ್ಟಿಯನ್ನು ನೀಡುವುದಿಲ್ಲ.
8. ಅಧಿಸೂಚನೆಯಲ್ಲಿ ಯಾವುದೇ ಬದಲಾವಣೆಗಳಾದಲ್ಲಿ ಅದು ಯು.ಜಿ.ಸಿ.ಯ ನಿಯಮಗಳಿಗೆ ಒಳಪಟ್ಟಿರುತ್ತದೆ.
9. ಪರೀಕ್ಷೆಗೆ ಸಂಬಂಧಪಟ್ಟ ಯಾವುದೇ ವಿವಾದಗಳಿದ್ದಲ್ಲಿ, ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದ (High Court of Karnataka) ವ್ಯಾಪ್ತಿಗೆ ಒಳಪಟ್ಟಿರುತ್ತದೆ.

## XIV) ಕೆಸೆಟ್ ಪರೀಕ್ಷೆಯಲ್ಲಿ ಅರ್ಹತೆ ಪಡೆದ ಅಭ್ಯರ್ಥಿಗಳು ಅರ್ಜಿ ಮತ್ತು ಇತರ ದಾಖಲೆಗಳನ್ನು ಗೆಝೆಟೆಡ್ ಅಧಿಕಾರಿಯಿಂದ ದೃಢೀಕರಿಸಿ ಸಲ್ಲಿಸಬೇಕಾದ ಅಡಕಗಳು ಈ ಕೆಳಗಿನಂತಿವೆ.

ಅಭ್ಯರ್ಥಿಯು ತಮ್ಮ ಅನ್‌ಲೈನ್ ಅರ್ಜಿಯ ಮುದ್ರಿತ ಅರ್ಜಿಯೊಂದಿಗೆ ಈ ಕೆಳಗಿನ ದಾಖಲೆಗಳನ್ನು ಪ್ರತ್ಯೇಕ A-4 ಅಳತೆಯ ಕಾಗದದಲ್ಲಿ ಮುದ್ರಿಸಿ ಸಲ್ಲಿಸಬೇಕು.

a) ಅರ್ಜಿ (ಒಂದು ಪ್ರತಿ)
b) ಅಂಚೆ ಕಛೇರಿ ಚಲನ್ ಪ್ರತಿ (Xerox Copy)
c) ಅಭ್ಯರ್ಥಿಯ ಹೆಸರು ಮತ್ತು ಪೊಷಕರ ಹೆಸರನ್ನು ಪರಿಶೀಲಿಸಲು 10ನೇ / ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ ಅತ್ಯಗತ್ಯ.
d) ಅಭ್ಯರ್ಥಿಗಳು SC/ ST, ಪ್ರವರ್ಗ II-A, II-B, III-A, III-B ಜಾತಿ ಮತ್ತು ಆದಾಯ ಪ್ರಮಾಣ ಪತ್ರ.
e) ವಿಶೇಷ ಚೇತನ ಅಭ್ಯರ್ಥಿಗಳು (PWD) **ಜಿಲ್ಲಾ ಸಿವಿಲ್ ಸರ್ಜನ್ ರವರಿಂದ ವೈದ್ಯಕೀಯ ಪ್ರಮಾಣ ಪತ್ರವನ್ನು ಧೃಡೀಕರಿಸಿ** ಲಗತ್ತಿಸಬೇಕು. [Medical Certificate with 40% or more disability].
f) ತೃತೀಯ ಲಿಂಗ ಅಭ್ಯರ್ಥಿಗಳು ಸಂಬಂಧಪಟ್ಟ ಜಿಲ್ಲಾ ಮ್ಯಾಜಿಸ್ಟ್ರೇಟ್ ರವರಿಂದ ಪಡೆದ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.
g) ಅಂತಿಮ ವರ್ಷದ ಸ್ನಾತಕೋತ್ತರ ಪದವಿಯ ಧೃಡೀಕೃತ ಅಂಕಪಟ್ಟಿಯ ಪ್ರತಿ
h) ಪರೀಕ್ಷಾ ಪ್ರಮಾಣಪತ್ರ (Result Sheet) ಮತ್ತು ಸ್ನಾತಕೋತ್ತರ ಪದವಿ ಅಂಕಪಟ್ಟಿಯನ್ನು ಸಲ್ಲಿಸಬೇಕು.

**XV) ಸಂಪರ್ಕಿಸಿ: ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಸಂಪಿಗೆ ರಸ್ತೆ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು– 560012, ದೂರವಾಣಿ: 080 – 23460460. ಇಮೇಲ್ : keakset2023@gmail.com ವೆಬ್‌ಸೈಟ್: http://kea.kar.nic.in**

ಸಹಿ/–
ಕಾರ್ಯನಿರ್ವಾಹಕ ನಿರ್ದೇಶಕರು
ಕರ್ನಾಟಕ ಪರೀಕ್ಷಾ ಪ್ರಾಧಿಕಾರ